| | | |
|---|---|---|
| ವಾಣಿಜ್ಯ ತೆರಿಗೆ | 1 52 | 0 00 |
| ಅಬಕಾರಿ | 0 89 | 0 00 |
| ಸಾರಿಗೆ | 0 74 | 0 00 |
| ನೋಂದಣಿ ಮತ್ತು ಮುದ್ರಾಂಕ | 7 26 | 0 00 |
| ಆರೋಗ್ಯ | 12 47 | 0 00 |
| ಶಿಕ್ಷಣ | 17 36 | 0 00 |
| ಕನ್ನಡ ಮತ್ತು ಸಂಸ್ಕೃತಿ | 0 99 | 0 00 |
| ಸಣ್ಣ ನೀರಾವರಿ | 38 13 | 0 00 |
| ಗ್ರಾಮೀಣಾಭಿವೃದ್ಧಿ | 0 00 | 8 65 |
| ಅರಣ್ಯ | 0 00 | 5 39 |
| ರಸ್ತೆಗಳು | 52 76 | 0 00 |
| ಪ್ರಕೃತಿ ವಿಕೋಪ ಪರಿಹಾರ | 240 20 | 474 88 |
| **ಒಟ್ಟು** | **471 30** | **594 26** |

754 (748) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಾಲ್ಲೂಕು ಕಛೇರಿಯ ಭೂಮಿ/ಕಿಯಾಸ್ಕ್ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆವಿಗೂ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಇಲ್ಲ

ಆ) ಭೂಮಿ ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳು ಯಾವುದು ಇಲ್ಲ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವಂತಹ ಗ್ರಾಮ ಲೆಕ್ಕಿಗರನ್ನು ಆಯ್ಕೆ ಮಾಡಿ, ತರಬೇತಿ ನೀಡಿ ಈ ಕೇಂದ್ರಗಳಿಗೆ ನೇಮಿಸಲಾಗುತ್ತಿದೆ

755 (1284) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಡೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 'ಬಗರ್ ಹುಕುಂ' ಸಮಿತಿ ರಚನೆಗೆ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು ,

ಆ) ''ಆರಾಧನಾ'' ಸಮಿತಿ ರಚನೆಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ